ಪ್ರಶ್ನೋತ್ತರ

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

ತೀರ್ಥಹಳ್ಳಿ ಮತಕ್ಷೇತ್ರದಲ್ಲಿ ಶಿಕ್ಷಕರ ಕೊರತೆ.

16 (57) ಶ್ರೀ ಕಿಮ್ಮನೆ ರತ್ನಾಕರ (ತೀರ್ಥಹಳ್ಳಿ) :– ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ತೀರ್ಥಹಳ್ಳಿ ಮತಕ್ಷೇತ್ರದಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಸಂಖ್ಯೆ ಎಷ್ಟು; ಸದರಿ ಶಾಲೆಗಳಲ್ಲಿ ಶಿಕ್ಷಕರ ಕೊರತೆ ಇದೆ (ಶಾಲಾವಾರು ವಿವರ ನೀಡುವುದು) ;

(ಆ) ಶಾಲೆಯ ಶಿಕ್ಷಕರ ಕೊರತೆ ನೀಗಿಸಲು ಪರ್ಯಾಯ ವ್ಯವಸ್ಥೆ ಮಾಡಲು ಸರ್ಕಾರ ಕೈಗೊಂಡ ಕ್ರಮವೇನು ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):–

(ಅ) ತೀರ್ಥಹಳ್ಳಿ ಮತಕ್ಷೇತ್ರದಲ್ಲಿ ಪ್ರಾಥಮಿಕ ಶಾಲೆಗಳು 236 ಹಾಗೂ ಪ್ರೌಢಶಾಲೆಗಳು 27 ಪ್ರಾಥಮಿಕ 35 ಶಾಲೆಗಳಲ್ಲಿ 40 ಶಿಕ್ಷಕರ ಹುದ್ದೆಗಳು ಖಾಲಿ ಇರುತ್ತವೆ. ಪ್ರೌಢಶಾಲೆಯಲ್ಲಿ ಪಿ.ಸಿ.ಎಂ. 05 ಶಿಕ್ಷಕರು ಹಾಗೂ ಸಿ.ಬಿ.ಜೆಡ್. –05 ಶಿಕ್ಷಕರುಗಳ ಹುದ್ದೆ ಖಾಲಿ ಇರುತ್ತದೆ.

(ಆ) ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮವಹಿಸಲಾಗುತ್ತಿದೆ.

ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ತೀರ್ಥಹಳ್ಳಿ,

ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆ ಮಾಹಿತಿ 25/11/2011ಕ್ಕೆ ಇದ್ದಂತೆ.

ಕ್ರ			ಹುದ್ದೆಗಳ		ಖಾಲಿ	
ಸಂ.	ತಾಲ್ಲೂಕು	ಶಾಲೆಯ ಹೆಸರು	ಪದನಾಮ	ವಿಷಯ	ಹುದ್ದೆ	ಷರಾ
1	ತೀರ್ಥಹಳ್ಳಿ	ಸ.ಹಿ.ಪ್ರಾ. ಸರಳ	ಸಹಶಿಕ್ಷಕರು	ಕನ್ನಡ ಸಾಮಾನ್ಯ	3	
2		ಸ.ಹಿ.ಪ್ರಾ. ಕುಚ್ಚಲು	ಸಹಶಿಕ್ಷಕರು	ಕನ್ನಡ ಸಾಮಾನ್ಯ	1	
3		ಸ.ಹಿ.ಪ್ರಾ. ಕುಡುವಳ್ಳಿ	ಸಹಶಿಕ್ಷಕರು	ಕನ್ನಡ ಸಾಮಾನ್ಯ	1	
4		ಸ.ಹಿ.ಪ್ರಾ. ಶೇಡ್ಗಾರ್	ಸಹಶಿಕ್ಷಕರು	ಕನ್ನಡ ಸಾಮಾನ್ಯ	2	

1	2	3	4	5	6
5		ಸ.ಹಿ.ಪ್ರಾ. ಮಲ್ಲದೂರು	ಸಹಶಿಕ್ಷಕರು	ಕನ್ನಡ ಸಾಮಾನ್ಯ	1
6		ಸ.ಹಿ.ಪ್ರಾ. ಕಸಗಾರ್	ಸಹಶಿಕ್ಷಕರು	ಕನ್ನಡ ಸಾಮಾನ್ಯ	1
7		ಸ.ಹಿ.ಪ್ರಾ. ವೆಂಕನಹಳ್ಳಿ	ಸಹಶಿಕ್ಷಕರು	ಕನ್ನಡ ಸಾಮಾನ್ಯ	1
8		ಸ.ಹಿ.ಪ್ರಾ. ತೊರೆಬೈಲು	ಸಹಶಿಕ್ಷಕರು	ಕನ್ನಡ ಸಾಮಾನ್ಯ	1
9		ಸ.ಹಿ.ಪ್ರಾ. ಹಾರಂಬಳ್ಳಿ	ಸಹಶಿಕ್ಷಕರು	ಕನ್ನಡ ಸಾಮಾನ್ಯ	1
10		ಸ.ಹಿ.ಪ್ರಾ. ಆಲೂರುಹೊಸಕೊಪ್ಪ	ಸಹಶಿಕ್ಷಕರು	ಕನ್ನಡ ಸಾಮಾನ್ಯ	1
11		ಸ.ಹಿ.ಪ್ರಾ. ಹೊಳೆಕೊಪ್ಪ	ಸಹಶಿಕ್ಷಕರು	ಕನ್ನಡ ಸಾಮಾನ್ಯ	1
12		ಸ.ಹಿ.ಪ್ರಾ. ಕೊಕ್ಕೋಡು	ಸಹಶಿಕ್ಷಕರು	ಕನ್ನಡ ಸಾಮಾನ್ಯ	1
13		ಸ.ಹಿ.ಪ್ರಾ. ಆಲ್ಗೇರಿ	ಸಹಶಿಕ್ಷಕರು	ಕನ್ನಡ ಸಾಮಾನ್ಯ	1
14		ಸ.ಹಿ.ಪ್ರಾ. ಬಾಳೆಕೋಡ್ಲು	ಸಹಶಿಕ್ಷಕರು	ಕನ್ನಡ ಸಾಮಾನ್ಯ	1
15		ಸ.ಹಿ.ಪ್ರಾ. ಬಿಳುವೆ	ಸಹಶಿಕ್ಷಕರು	ಕನ್ನಡ ಸಾಮಾನ್ಯ	1
16		ಸ.ಹಿ.ಪ್ರಾ. ಲಕ್ಕುಂದ	ಸಹಶಿಕ್ಷಕರು	ಕನ್ನಡ ಸಾಮಾನ್ಯ	1
17		ಸ.ಹಿ.ಪ್ರಾ. ಗುಂಡಿಬೈಲು	ಸಹಶಿಕ್ಷಕರು	ಕನ್ನಡ ಸಾಮಾನ್ಯ	1
18		ಸ.ಹಿ.ಪ್ರಾ. ಬಂದ್ಯಾ	ಸಹಶಿಕ್ಷಕರು	ಕನ್ನಡ ಸಾಮಾನ್ಯ	2
19		ಸ.ಹಿ.ಪ್ರಾ. ನೆಕ್ಕರಗೋಡು	ಸಹಶಿಕ್ಷಕರು	ಕನ್ನಡ ಸಾಮಾನ್ಯ	2
20		ಸ.ಹಿ.ಪ್ರಾ. ದಾಸನಕೊಡಿಗೆ	ಸಹಶಿಕ್ಷಕರು	ಕನ್ನಡ ಸಾಮಾನ್ಯ	1
21		ಸ.ಹಿ.ಪ್ರಾ. ಜಂಬೆ	ಸಹಶಿಕ್ಷಕರು	ಕನ್ನಡ ಸಾಮಾನ್ಯ	1
22		ಸ.ಹಿ.ಪ್ರಾ. ಜಯಪುರ	ಸಹಶಿಕ್ಷಕರು	ಕನ್ನಡ ಸಾಮಾನ್ಯ	1
23		ಸ.ಹಿ.ಪ್ರಾ. ಮಲ್ಲೇಸರ	ಸಹಶಿಕ್ಷಕರು	ಕನ್ನಡ ಸಾಮಾನ್ಯ	1
24		ಸ.ಹಿ.ಪ್ರಾ. ಅಕ್ಲಾಪುರ	ಸಹಶಿಕ್ಷಕರು	ಕನ್ನಡ ಸಾಮಾನ್ಯ	2
25		ಸ.ಹಿ.ಪ್ರಾ. ಕೊಣಂದೂರು	ಸಹಶಿಕ್ಷಕರು	ಕನ್ನಡ ಸಾಮಾನ್ಯ	1
26		ಸ.ಹಿ.ಪ್ರಾ. ಕುಕ್ಕನಕೊಡಿಗೆ	ಸಹಶಿಕ್ಷಕರು	ಕನ್ನಡ ಸಾಮಾನ್ಯ	1
27		ಸ.ಹಿ.ಪ್ರಾ. ಎಂ.ಇ. ಕೋಣಂದೂರು	ಸಹಶಿಕ್ಷಕರು	ಕನ್ನಡ ಸಾಮಾನ್ಯ	1
28		ಸ.ಹಿ.ಪ್ರಾ. ಹೊಸಗದ್ದೆ	ಸಹಶಿಕ್ಷಕರು	ಕನ್ನಡ ಸಾಮಾನ್ಯ	1
29		.....	....	...	
30		ಸ.ಹಿ.ಪ್ರಾ. ಹುಲಿಗುದ್ದು	ಸಹಶಿಕ್ಷಕರು	ಕನ್ನಡ ಸಾಮಾನ್ಯ	1
31		ಸ.ಹಿ.ಪ್ರಾ. ಕನಸವಳ್ಳಿ	ಸಹಶಿಕ್ಷಕರು	ಕನ್ನಡ ಸಾಮಾನ್ಯ	1
32		ಸ.ಹಿ.ಪ್ರಾ. ಮಲ್ಲದೂರು	ಸಹಶಿಕ್ಷಕರು	ಕನ್ನಡ ಸಾಮಾನ್ಯ	1
33		ಸ.ಹಿ.ಪ್ರಾ. ಹಳಗ	ಸಹಶಿಕ್ಷಕರು	ಕನ್ನಡ ಸಾಮಾನ್ಯ	1

1	2	3	4	5	6
34		ಸ.ಹಿ.ಪ್ರಾ. ಹುತ್ತಳ್ಳಿ	ಸಹಶಿಕ್ಷಕರು	ಕನ್ನಡ ಸಾಮಾನ್ಯ	1
35		ಸ.ಹಿ.ಪ್ರಾ. ಕಿಕ್ಕೇರಿ	ಸಹಶಿಕ್ಷಕರು	ಕನ್ನಡ ಸಾಮಾನ್ಯ	3
36		ಸ.ಹಿ.ಪ್ರಾ. ಸಿದ್ದಾಪುರ	ಸಹಶಿಕ್ಷಕರು	ಕನ್ನಡ ಸಾಮಾನ್ಯ	1
37		ಸ.ಹಿ.ಪ್ರಾ. ಬಾವಿಕೈಸರು	ಸಹಶಿಕ್ಷಕರು	ಕನ್ನಡ ಸಾಮಾನ್ಯ	1
38		ಸ.ಹಿ.ಪ್ರಾ. ವಿರೂಪಾಪುರ	ಸಹಶಿಕ್ಷಕರು	ಕನ್ನಡ ಸಾಮಾನ್ಯ	1
39		ಸ.ಹಿ.ಪ್ರಾ. ಕುಮುದ್ವತಿಗಣಿ	ಸಹಶಿಕ್ಷಕರು	ಕನ್ನಡ ಸಾಮಾನ್ಯ	2
40		ಸ.ಹಿ.ಪ್ರಾ. ಹುಲಿಸರ	ಸಹಶಿಕ್ಷಕರು	ಕನ್ನಡ ಸಾಮಾನ್ಯ	2
41		ಸ.ಹಿ.ಪ್ರಾ. ತೆಂಗಿನಕೊಪ್ಪ	ಸಹಶಿಕ್ಷಕರು	ಕನ್ನಡ ಸಾಮಾನ್ಯ	2
42		ಸ.ಹಿ.ಪ್ರಾ. ಹೊಸಕೆಸಲೂರು	ಸಹಶಿಕ್ಷಕರು	ಕನ್ನಡ ಸಾಮಾನ್ಯ	1
43		ಸ.ಹಿ.ಪ್ರಾ. ಹೊಸಕೆರೆ	ಸಹಶಿಕ್ಷಕರು	ಕನ್ನಡ ಸಾಮಾನ್ಯ	2
44		ಸ.ಹಿ.ಪ್ರಾ. ಕಡೇಗದ್ದೆ	ಸಹಶಿಕ್ಷಕರು	ಕನ್ನಡ ಸಾಮಾನ್ಯ	2
45		ಸ.ಹಿ.ಪ್ರಾ. ಸಾಬಳ	ಸಹಶಿಕ್ಷಕರು	ಕನ್ನಡ ಸಾಮಾನ್ಯ	1
46		ಸ.ಹಿ.ಪ್ರಾ. ಖಂಡಕ	ಸಹಶಿಕ್ಷಕರು	ಕನ್ನಡ ಸಾಮಾನ್ಯ	1
47		ಸ.ಹಿ.ಪ್ರಾ. ಮುತ್ತುವಳ್ಳಿ	ಸಹಶಿಕ್ಷಕರು	ಕನ್ನಡ ಸಾಮಾನ್ಯ	1
48		ಸ.ಹಿ.ಪ್ರಾ. ದತ್ತರಾಜಪುರ	ಸಹಶಿಕ್ಷಕರು	ಕನ್ನಡ ಸಾಮಾನ್ಯ	1
49		ಸ.ಹಿ.ಪ್ರಾ. ಹಂದಲಸು	ಸಹಶಿಕ್ಷಕರು	ಕನ್ನಡ ಸಾಮಾನ್ಯ	3
50		ಸ.ಹಿ.ಪ್ರಾ. ಬದ್ರರಾಜಪುರ	ಸಹಶಿಕ್ಷಕರು	ಕನ್ನಡ ಸಾಮಾನ್ಯ	1
51		ಸ.ಹಿ.ಪ್ರಾ. ಚಂಗಾರು	ಸಹಶಿಕ್ಷಕರು	ಕನ್ನಡ ಸಾಮಾನ್ಯ	1
52		ಸ.ಹಿ.ಪ್ರಾ. ಹೆದ್ದೂರು	ಸಹಶಿಕ್ಷಕರು	ಕನ್ನಡ ಸಾಮಾನ್ಯ	1
53		ಸ.ಹಿ.ಪ್ರಾ. ರಾಗಿಹಕ್ಕಲು	ಸಹಶಿಕ್ಷಕರು	ಕನ್ನಡ ಸಾಮಾನ್ಯ	1
54		ಸ.ಹಿ.ಪ್ರಾ. ಹಾರಂಬಳ್ಳಿ	ಸಹಶಿಕ್ಷಕರು	ಕನ್ನಡ ಸಾಮಾನ್ಯ	1
55		ಸ.ಹಿ.ಪ್ರಾ. ಸಾಲೆಕೊಪ್ಪ	ಸಹಶಿಕ್ಷಕರು	ಕನ್ನಡ ಸಾಮಾನ್ಯ	1
56		ಸ.ಹಿ.ಪ್ರಾ. ಸಂಕ್ಲಾಪುರ	ಸಹಶಿಕ್ಷಕರು	ಕನ್ನಡ ಸಾಮಾನ್ಯ	1
57		ಸ.ಹಿ.ಪ್ರಾ. ಕಾಸರವಳ್ಳಿ	ಸಹಶಿಕ್ಷಕರು	ಕನ್ನಡ ಸಾಮಾನ್ಯ	1
58		ಸ.ಹಿ.ಪ್ರಾ. ಹೊಸಕೆಸಲೂರು	ಸಹಶಿಕ್ಷಕರು	ಕನ್ನಡ ಸಾಮಾನ್ಯ	2
59		ಸ.ಹಿ.ಪ್ರಾ. ಕೇಳೂರು	ಸಹಶಿಕ್ಷಕರು	ಕನ್ನಡ ಸಾಮಾನ್ಯ	1

1	2	3	4	5	6
60		ಸ.ಹಿ.ಪ್ರಾ. ಅರೇಹಳ್ಳಿ	ಸಹಶಿಕ್ಷಕರು	ಕನ್ನಡ ಸಾಮಾನ್ಯ	1
61		ಸ.ಹಿ.ಪ್ರಾ. ಹಾರಂಬಳ್ಳಿ	ಸಹಶಿಕ್ಷಕರು	ಕನ್ನಡ ಸಾಮಾನ್ಯ	1
62		.....	...	...	
63		ಸ.ಹಿ.ಪ್ರಾ. ಕಟ್ಟೆಹಕ್ಕಲು	ಸಹಶಿಕ್ಷಕರು	ಕನ್ನಡ ಸಾಮಾನ್ಯ	1
64		ಸ.ಹಿ.ಪ್ರಾ. ಜೋಗಿಕೊಪ್ಪ	ಸಹಶಿಕ್ಷಕರು	ಕನ್ನಡ ಸಾಮಾನ್ಯ	1
65		ಸ.ಹಿ.ಪ್ರಾ. ತೆಮ್ಮೆಮನೆ	ಸಹಶಿಕ್ಷಕರು	ಕನ್ನಡ ಸಾಮಾನ್ಯ	2
66		ಸ.ಕಿ.ಪ್ರಾ. ಬಳಗಟ್ಟೆ	ಸಹಶಿಕ್ಷಕರು	ಕನ್ನಡ ಸಾಮಾನ್ಯ	1
67		ಸ.ಹಿ.ಪ್ರಾ. ಹಾರಂಬಳ್ಳಿ	ಸಹಶಿಕ್ಷಕರು	ಕನ್ನಡ ಸಾಮಾನ್ಯ	1
68		ಸ.ಕಿ.ಪ್ರಾ. ಅಂದಗೆರೆ	ಸಹಶಿಕ್ಷಕರು	ಕನ್ನಡ ಸಾಮಾನ್ಯ	2
69		ಸ.ಕಿ.ಪ್ರಾ. ಕೂಳೂರು	ಸಹಶಿಕ್ಷಕರು	ಕನ್ನಡ ಸಾಮಾನ್ಯ	2
70		ಸ.ಹಿ.ಪ್ರಾ. ಬಂಡಿಗಡಿ	ಸಹಶಿಕ್ಷಕರು	ಕನ್ನಡ ಸಾಮಾನ್ಯ	1
71		ಸ.ಹಿ.ಪ್ರಾ. ಚಿಕ್ಕಳೂರು	ಸಹಶಿಕ್ಷಕರು	ಕನ್ನಡ ಸಾಮಾನ್ಯ	2
72		ಸ.ಹಿ.ಪ್ರಾ. ಬೆಂಡೆಕೊಪ್ಪ	ಸಹಶಿಕ್ಷಕರು	ಕನ್ನಡ ಸಾಮಾನ್ಯ	2
73		ಸ.ಹಿ.ಪ್ರಾ. ಮಲ್ಲಂದೂರು	ಸಹಶಿಕ್ಷಕರು	ಕನ್ನಡ ಸಾಮಾನ್ಯ	1
74		ಸ.ಹಿ.ಪ್ರಾ. ಮುಂಡುವಳ್ಳಿ	ಸಹಶಿಕ್ಷಕರು	ಕನ್ನಡ ಸಾಮಾನ್ಯ	1
75		ಸ.ಕಿ.ಪ್ರಾ. ಮುತ್ತಾನ	ಸಹಶಿಕ್ಷಕರು	ಕನ್ನಡ ಸಾಮಾನ್ಯ	1
76		ಸ.ಹಿ.ಪ್ರಾ. ಚಕ್ಕೋಡಬೈಲು	ಸಹಶಿಕ್ಷಕರು	ಕನ್ನಡ ಸಾಮಾನ್ಯ	1
77		ಸ.ಕಿ.ಪ್ರಾ. ಮಳಲಿಕೊಪ್ಪ	ಸಹಶಿಕ್ಷಕರು	ಕನ್ನಡ ಸಾಮಾನ್ಯ	1
78		ಸ.ಹಿ.ಪ್ರಾ. ಪಡುವಳ್ಳಿ	ಸಹಶಿಕ್ಷಕರು	ಕನ್ನಡ ಸಾಮಾನ್ಯ	1
79		ಸ.ಹಿ.ಪ್ರಾ. ಹೊನ್ನೆತಾಳು	ಸಹಶಿಕ್ಷಕರು	ಕನ್ನಡ ಸಾಮಾನ್ಯ	1
80		ಸ.ಕಿ.ಪ್ರಾ. ದೋಣಿಹಕ್ಕಲು	ಸಹಶಿಕ್ಷಕರು	ಕನ್ನಡ ಸಾಮಾನ್ಯ	1
81		ಸ.ಹಿ.ಪ್ರಾ. ಹೇರಂಭಾಪುರ	ಸಹಶಿಕ್ಷಕರು	ಕನ್ನಡ ಸಾಮಾನ್ಯ	1
82		ಸ.ಹಿ.ಪ್ರಾ. ಹೇರಂಭಾಪುರ	ಸಹಶಿಕ್ಷಕರು	ಕನ್ನಡ ಸಾಮಾನ್ಯ	1
83		ಸ.ಹಿ.ಪ್ರಾ. ಬೆಳ್ಳಂಗಿ	ಸಹಶಿಕ್ಷಕರು	ಕನ್ನಡ ಸಾಮಾನ್ಯ	1
84		ಸ.ಕಿ.ಪ್ರಾ. ಮುಳ್ಕೇವಿ	ಸಹಶಿಕ್ಷಕರು	ಕನ್ನಡ ಸಾಮಾನ್ಯ	2
85		ಸ.ಕಿ.ಪ್ರಾ. ಮುಳ್ಕೇವಿ	ಸಹಶಿಕ್ಷಕರು	ಕನ್ನಡ ಸಾಮಾನ್ಯ	2
86		ಸ.ಹಿ.ಪ್ರಾ. ಆಗುಂಬೆ	ಸಹಶಿಕ್ಷಕರು	ಕನ್ನಡ ವಿಜ್ಞಾನ	1
87		ಸ.ಕಿ.ಪ್ರಾ. ತೋಟದಕೊಪ್ಪ	ಸ.ಶಿ.ಎಸ್.ಎಸ್.ಎ	ಕನ್ನಡ ಸಾಮಾನ್ಯ	1

1	2	3	4	5	6
		ಉರ್ದು ಸಹಶಿಕ್ಷಕರು			
01		ಸ.ಹಿ.ಪ್ರಾ. ಉರ್ದು ಮಂಡಗದ್ದೆ	ಸಹಶಿಕ್ಷಕರು	ಉರ್ದು	2
02		ಸ.ಹಿ.ಪ್ರಾ. ಉರ್ದು ಮಂಡಗದ್ದೆ	ಸಹಶಿಕ್ಷಕರು	ಉರ್ದು	2
03		ಸ.ಹಿ.ಪ್ರಾ. ಉರ್ದು ತೀರ್ಥಹಳ್ಳಿ	ಸಹಶಿಕ್ಷಕರು	ಉರ್ದು	1
		ಹಿಂದಿ ಸಹಶಿಕ್ಷಕರು			
01		ಸ.ಹಿ.ಪ್ರಾ. ಕನ್ನಂಗಿ	ಸಹಶಿಕ್ಷಕರು	ಹಿಂದಿ	1
02		ಸ.ಹಿ.ಪ್ರಾ. ಗುಡ್ಡೇಕೊಪ್ಪ	ಸಹಶಿಕ್ಷಕರು	ಹಿಂದಿ	1
03		ಸ.ಹಿ.ಪ್ರಾ. ಮಂಡಗದ್ದೆ	ಸಹಶಿಕ್ಷಕರು	ಹಿಂದಿ	1

ಪದವೀಧರೇತರ ಮುಖ್ಯಶಿಕ್ಷಕರ ಖಾಲಿಹುದ್ದೆ ದಿನಾಂಕ: 13-09-2011 ರಲ್ಲಿದ್ದಂತೆ

ಕ್ರ ಸಂ.	ತಾಲ್ಲೂಕು	ಶಾಲೆಯ ಹೆಸರು	ಹುದ್ದೆಗಳ ಪದನಾಮ	ಖಾಲಿ ವಿಷಯ	ಹುದ್ದೆ	ಷರಾ
1	ತೀರ್ಥಹಳ್ಳಿ	ಸ.ಹಿ.ಪ್ರಾ. ಅರಗ	ಪ.ಮು.ತಿ.	ಕನ್ನಡ ಸಾಮಾನ್ಯ	1	ದಿನಾಂಕ 28
2		ಸ.ಹಿ.ಪ್ರಾ. ಕಟ್ಟೆಹಕ್ಕಲು	ಪ.ಮು.ತಿ	ಕನ್ನಡ ಸಾಮಾನ್ಯ	1	ರಂದು ಬಡ್ತಿ
3		ಸ.ಹಿ.ಪ್ರಾ. ಮೇಗರವಳ್ಳಿ	ಪ.ಮು.ತಿ.	ಕನ್ನಡ ಸಾಮಾನ್ಯ	1	ಮೂಲಕ ಕೌನ್ಸಿ
			ಒಟು		3	ಲಿಂಗ್
						ಭರ್ತಿಸಿದೆ.

ಬಡ್ತಿ ಮುಖ್ಯಶಿಕ್ಷಕರ ಖಾಲಿಹುದ್ದೆ

1	ತೀರ್ಥಹಳ್ಳಿ	ಸ.ಹಿ.ಪ್ರಾ. ಶಾಲೆ ಬಿದರಗೋಡು	ಮುಖ್ಯಶಿಕ್ಷಕರು	ಕನ್ನಡ ಸಾಮಾನ್ಯ	1
2		ಸ.ಹಿ.ಪ್ರಾ. ಶಾಲೆ ಹಾರೋಗುಳಿಗೆ	ಮುಖ್ಯಶಿಕ್ಷಕರು	ಕನ್ನಡ ಸಾಮಾನ್ಯ	1
3		ಸ.ಹಿ.ಪ್ರಾ. ಶಾಲೆ ಬುಕ್ಲಾಪುರ	ಮುಖ್ಯಶಿಕ್ಷಕರು	ಕನ್ನಡ ಸಾಮಾನ್ಯ	1
4		ಸ.ಹಿ.ಪ್ರಾ. ಶಾಲೆ ಸಾಲೇಕೊಪ್ಪ	ಮುಖ್ಯಶಿಕ್ಷಕರು	ಕನ್ನಡ ಸಾಮಾನ್ಯ	1
5		ಸ.ಹಿ.ಪ್ರಾ. ಶಾಲೆ ಹೆದ್ದೂರು	ಮುಖ್ಯಶಿಕ್ಷಕರು	ಕನ್ನಡ ಸಾಮಾನ್ಯ	1
6		ಸ.ಹಿ.ಪ್ರಾ. ಶಾಲೆ ಚಪ್ಪಳಕಟ್ಟೆ	ಮುಖ್ಯಶಿಕ್ಷಕರು	ಕನ್ನಡ ಸಾಮಾನ್ಯ	1
7		ಸ.ಹಿ.ಪ್ರಾ. ಶಾಲೆ ಹೊನ್ನೇತಾಳು	ಮುಖ್ಯಶಿಕ್ಷಕರು	ಕನ್ನಡ ಸಾಮಾನ್ಯ	1
8		ಸ.ಹಿ.ಪ್ರಾ. ಶಾಲೆ ಹೊನ್ನೇತಾಳು	ಮುಖ್ಯಶಿಕ್ಷಕರು	ಕನ್ನಡ ಸಾಮಾನ್ಯ	1
9		ಸ.ಹಿ.ಪ್ರಾ. ಶಾಲೆ ಬೆಳ್ಳಂಗಿ	ಮುಖ್ಯಶಿಕ್ಷಕರು	ಕನ್ನಡ ಸಾಮಾನ್ಯ	1
10		ಸ.ಹಿ.ಪ್ರಾ. ಶಾಲೆ ಬಾವಿಕ್ಕೆಸರು	ಮುಖ್ಯಶಿಕ್ಷಕರು	ಕನ್ನಡ ಸಾಮಾನ್ಯ	1
11		ಸ.ಹಿ.ಪ್ರಾ. ಶಾಲೆ ಅಕ್ಲಾಪುರ	ಮುಖ್ಯಶಿಕ್ಷಕರು	ಕನ್ನಡ ಸಾಮಾನ್ಯ	1

12	ಸ.ಹಿ.ಪ್ರಾ. ಶಾಲೆ ಹಿರೇಸರ	ಮುಖ್ಯಶಿಕ್ಷಕರು	ಕನ್ನಡ ಸಾಮಾನ್ಯ	1
13	ಸ.ಹಿ.ಪ್ರಾ. ಶಾಲೆ ಮತ್ತಿಗಾರ್	ಮುಖ್ಯಶಿಕ್ಷಕರು	ಕನ್ನಡ ಸಾಮಾನ್ಯ	1
14	ಸ.ಹಿ.ಪ್ರಾ. ಶಾಲೆ ಕನ್ನಂಗಿ	ಮುಖ್ಯಶಿಕ್ಷಕರು	ಕನ್ನಡ ಸಾಮಾನ್ಯ	1
15	ಸ.ಹಿ.ಪ್ರಾ. ಶಾಲೆ ಆಗುಂಬೆ	ಮುಖ್ಯಶಿಕ್ಷಕರು	ಕನ್ನಡ ಸಾಮಾನ್ಯ	1
16	ಸ.ಹಿ.ಪ್ರಾ. ಶಾಲೆ ಕುರುವಳ್ಳಿ	ಮುಖ್ಯಶಿಕ್ಷಕರು	ಕನ್ನಡ ಸಾಮಾನ್ಯ	1
17	ಸ.ಹಿ.ಪ್ರಾ. ಶಾಲೆ ತೂದೂರು	ಮುಖ್ಯಶಿಕ್ಷಕರು	ಕನ್ನಡ ಸಾಮಾನ್ಯ	1
18	ಸ.ಹಿ.ಪ್ರಾ. ಶಾಲೆ ಆಗುಂಬೆ	ಮುಖ್ಯಶಿಕ್ಷಕರು	ಕನ್ನಡ ಸಾಮಾನ್ಯ	1
19	ಸ.ಹಿ.ಪ್ರಾ. ಶಾಲೆ ಹಳೇಕೆಸಲೂರು	ಮುಖ್ಯಶಿಕ್ಷಕರು	ಕನ್ನಡ ಸಾಮಾನ್ಯ	1

ದೈಹಿಕ ಶಿಕ್ಷಕರ ಖಾಲಿಹುದ್ದೆ

01	ಸ.ಹಿ.ಪ್ರಾ. ದೇವಂಗಿ	ದೈ.ಶಿ.	ದೈಹಿಕ ಶಿಕ್ಷಣ್ಯ	1
02	ಮಾ. ಸ.ಹಿ.ಪ್ರಾ. ಕೋಣಂದೂರು	ದೈ.ಶಿ.	ದೈಹಿಕ ಶಿಕ್ಷಣ್ಯ	1

ವೃತ್ತಿಶಿಕ್ಷಕರ ಖಾಲಿಹುದ್ದೆ

03	ಮಾ. ಸ.ಹಿ.ಪ್ರಾ. ಮಾಳೂರು	ವೃ.ಶಿ.	ಸಂಗೀತ	1
04	ಸ.ಹಿ.ಪ್ರಾ. ಆಗುಂಬೆ	ವೃ.ಶಿ.	ಸಂಗೀತ	1
05	ಮಾ. ಸ.ಹಿ.ಪ್ರಾ. ಮಾಳೂರು	ವೃ.ಶಿ.	ಚಿತ್ರಕಲೆ	1
	ಮಾ. ಸ.ಹಿ.ಪ್ರಾ. ಮಾಳೂರು	ವ್ಯವಸಾಯ	ವ್ಯವಸಾಯ	1

ಘೋಷ್ವಾರೆ

ಸಹಶಿಕ್ಷಕರು (ಕನ್ನಡ)	87
ಸಹಶಿಕ್ಷಕರು (ಉರ್ದು)	3
ವಿಜ್ಞಾನ ಶಿಕ್ಷಕರು	1
ದೈಹಿಕ ಶಿಕ್ಷಕರು	2
ವೃತ್ತಿ ಶಿಕ್ಷಕರು	4
ಬಡ್ತಿ ಮುಖ್ಯಶಿಕ್ಷಕರು	19
ಪದವೀದರೇತರ ಮುಯಖ್ಯಶಿಕ್ಷಕರು	3
ಹಿಂದಿ ಶಿಕ್ಷಕರು	3
ಎಸ್.ಎಸ್.ಎ. ಶಿಕ್ಷಕರು	1
ಒಟ್ಟು ಖಾಲಿ ಹುದ್ದೆಗಳು	123

ದೈಹಿಕ ಶಿಕ್ಷಕರು ಗ್ರೇಡ್ 1 ಮತ್ತು 2

01	ಶಿವಮೊಗ್ಗ	ತೀರ್ಥಹಳ್ಳಿ	ಸ.ವ.ಪೂ.ಕಾಲೇಜು ತೀರ್ಥಹಳ್ಳಿ	ದೈಶಿ ಶಿಕ್ಷಕರು ಗ್ರೇಡ್ –11	ನಿವೃತ್ತಿಯಿಂದ	01–08–2006	ನಿವೃತ್ತಿ	ಎ
02	ಶಿವಮೊಗ್ಗ	ತೀರ್ಥಹಳ್ಳಿ	ಸ.ವ.ಪೂ.ಕಾಲೇಜು ಬಸವಾನಿ	ದೈಶಿ ಶಿಕ್ಷಕರು ಗ್ರೇಡ್ –1	ವರ್ಗಾವಣೆಯಿಂದ	23.7.2010	ವರ್ಗಾವಣೆಯಿಂದ	ಸಿ
03	ಶಿವಮೊಗ್ಗ	ತೀರ್ಥಹಳ್ಳಿ	ಸರ್ಕಾರಿ ಪ್ರೌಶಾಲೆ ನೊಣಬೂರು	ದೈಶಿ ಶಿಕ್ಷಕರು ಗ್ರೇಡ್ –1	ವರ್ಗಾವಣೆಯಿಂದ		ವರ್ಗಾವಣೆಯಿಂದ	ಸಿ

ಇಂಗ್ಲೀಷ್ ಶಿಕ್ಷಕರು

01	ಶಿವಮೊಗ್ಗ	ತೀರ್ಥಹಳ್ಳಿ	ಸರ್ಕಾರಿ ಪ್ರೌಶಾಲೆ ಕನ್ನಂಗಿ	ಸಹ ಶಿಕ್ಷಕರು	ವರ್ಗಾವಣೆಯಿಂದ	30.08.2011	ವರ್ಗಾವಣೆಯಿಂದ	ಸಿ

ವೃತ್ತಿ ಶಿಕ್ಷಕರು

01	ಶಿವಮೊಗ್ಗ	ತೀರ್ಥಹಳ್ಳಿ	ಸರ್ಕಾರಿ ಪ್ರೌಶಾಲೆ ಹೆದ್ಕೂರು	ಹೊಲಿಗೆ ಶಿಕ್ಷಕರು	ಹೊಸ ಹುದ್ದೆ ಮಂಜೂರಾತಿ		ಹುದ್ದೆ ಮಂಜೂರಾತಿ	ಸಿ
02	ಶಿವಮೊಗ್ಗ	ತೀರ್ಥಹಳ್ಳಿ	ಸ.ಪ.ಪೂ. ಕಾಲೇಜ್‌ಛೇಫ್ ಅಗ್ರಿಕಲ್ಚರಲ್ ತೀರ್ಥಹಳ್ಳಿ	ವರ್ಗಾವಣೆಯಿಂದ ಇನ್ ಸ್ಟ್ರಕ್ಟರ್	ವರ್ಗಾವಣೆಯಿಂದ	15.7.98	ವರ್ಗಾವಣೆಯಿಂದ	ಎ
03	ಶಿವಮೊಗ್ಗ	ತೀರ್ಥಹಳ್ಳಿ	ಸರ್ಕಾರಿ ಪ್ರೌಶಾಲೆ ಕೋಡ್ಲು	ಸಂಗೀತ	ಪ್ರಾರಂಭದಿಂದ		ಪ್ರಾರಂಭದಿಂದ	ಸಿ
04	ಶಿವಮೊಗ್ಗ	ತೀರ್ಥಹಳ್ಳಿ	ಸರ್ಕಾರಿ ಪ್ರೌಶಾಲೆ ಕೋಡ್ಲು	ಹೊಲಿಗೆ	ಪ್ರಾರಂಭದಿಂದ		ಪ್ರಾರಂಭದಿಂದ	ಸಿ
05	ಶಿವಮೊಗ್ಗ	ತೀರ್ಥಹಳ್ಳಿ	ಸ.ಪ.ಪೂ. ಕಾಲೇಜ್ ಮುಳಲಿಮುಕ್ಕಿ	ಸಂಗೀತ	ವರ್ಗಾವಣೆಯಿಂದ		ವರ್ಗಾವಣೆಯಿಂದ	ಸಿ
06	ಶಿವಮೊಗ್ಗ	ತೀರ್ಥಹಳ್ಳಿ	ಸರ್ಕಾರಿ ಪ್ರೌಶಾಲೆ ತನಿಕಲ್	ಹೊಲಿಗೆ	ಹುದ್ದೆ ಮಂಜೂರಾತಿ		ಹುದ್ದೆ ಮಂಜೂರಾತಿ	ಸಿ
07	ಶಿವಮೊಗ್ಗ	ತೀರ್ಥಹಳ್ಳಿ	ಸರ್ಕಾರಿ ಪ್ರೌಶಾಲೆ ಗುಡ್ಡೇಕೊಪ್ಪ	ಹೊಲಿಗೆ	ವರ್ಗಾವಣೆಯಿಂದ	01–06–2004	ವರ್ಗಾವಣೆಯಿಂದ	ಸಿ
08	ಶಿವಮೊಗ್ಗ	ತೀರ್ಥಹಳ್ಳಿ	ಸರ್ಕಾರಿ ಪ್ರೌಶಾಲೆ ನೊಣಬೂರು	ಸಂಗೀತ	ಸ್ಥಳಾಂತರದಿಂದ ಹುದ್ದೆ ಮಂಜೂರಾಗಿರುತ್ತದೆ ರಾಮಕೃಷ್ಣಮರ		ಸ್ಥಳಾಂತರದಿಂದ ಹುದ್ದೆ ಮಂಜೂರಾಗಿರುತ್ತದೆ ರಾಮಕೃಷ್ಣಮರ	ಸಿ
09	ಶಿವಮೊಗ್ಗ	ತೀರ್ಥಹಳ್ಳಿ	ಸರ್ಕಾರಿ ಪ್ರೌಶಾಲೆ ಮತ್ತಿಗಾರ್	ಹೊಲಿಗೆ	ಹೊಸ ಹುದ್ದೆ ಮಂಜೂರಾತಿ		ಹುದ್ದೆ ಮಂಜೂರಾತಿ	ಸಿ
10	ಶಿವಮೊಗ್ಗ	ತೀರ್ಥಹಳ್ಳಿ	ಸರ್ಕಾರಿ ಪ್ರೌಶಾಲೆ ಬಿಳಲುಕೊಪ್ಪ	ಹೊಲಿಗೆ	ಹೊಸ ಹುದ್ದೆ ಮಂಜೂರಾತಿ		ಹುದ್ದೆ ಮಂಜೂರಾತಿ	ಸಿ
11	ಶಿವಮೊಗ್ಗ	ತೀರ್ಥಹಳ್ಳಿ	ಸರ್ಕಾರಿ ಪ್ರೌಶಾಲೆ	ಚಿತ್ರಕಲೆ	ವರ್ಗಾವಣೆಯಿಂದ		ವರ್ಗಾವಣೆಯಿಂದ	ಸಿ
12	ಶಿವಮೊಗ್ಗ	ತೀರ್ಥಹಳ್ಳಿ	ಸರ್ಕಾರಿ ಪ್ರೌಶಾಲೆ ಕಟ್ಟೆಹಕ್ಕಲು	ಸಂಗೀತ	ಸ್ಥಳಾಂತರದಿಂದ ಹುದ್ದೆ ಮಂಜೂರಾಗಿರುತ್ತದೆ ಹೆದ್ಕೂರು		ಸ್ಥಳಾಂತರದಿಂದ ಹುದ್ದೆ ಮಂಜೂರಾಗಿರುತ್ತದೆ ಹೆದ್ಕೂರು	ಸಿ

ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ತೀರ್ಥಹಳ್ಳಿ, ತೀರ್ಥಹಳ್ಳಿ ತಾಲ್ಲೂಕು

ಶಿವಮೊಗ್ಗ ಜಿಲ್ಲೆ ನಮೂನೆ

ಸರ್ಕಾರಿ ಪ್ರೌಢಶಾಲೆಗಳಲ್ಲಿ ಖಾಲಿ ಇರುವ ಹುದ್ದೆಗಳ ವಿವರ ದಿನಾಂಕ: 25–11–2011 ರಲ್ಲಿದ್ದಂತೆ

ಕ್ರ ಸಂ.	ಜಿಲ್ಲೆಯ ಹೆಸರು	ತಾಲ್ಲೂಕಿನ ಹೆಸರು	ಹುದ್ದೆ ಖಾಲಿ ಆಗಿರುವ ಸರ್ಕಾರಿ ಪ್ರೌಢಶಾಲೆಯ ಹೆಸರು	ಹುದ್ದೆ ವಿಷಯ	ಹುದ್ದೆ ಖಾಲಿ ಆಗಲು ಕಾರಣ	ಹುದ್ದೆ ಯಾವ ದಿನಾಂಕದಿಂದ ಖಾಲಿ ಇದೆ.	ಹುದ್ದೆ ಖಾಲಿಯಾದ ರೀತಿ	ವಲಯ
1.	ಶಿವಮೊಗ್ಗ	ತೀರ್ಥಹಳ್ಳಿ	ಸರ್ಕಾರಿ ಪದವಿ ಪೂರ್ವ ಕಾಲೇಜು ತೀರ್ಥಹಳ್ಳಿ	ಉಪ ಪ್ರಾಂಶುನಾಲಯ	ನಿವೃತ್ತಿಯಿಂದ	31–12–2010	ನಿವೃತ್ತಿ	ಎ
2.	ಶಿವಮೊಗ್ಗ	ತೀರ್ಥಹಳ್ಳಿ	ಸರ್ಕಾರಿ ಪ್ರೌ ಶಾಲೆ ಕನ್ನಂಗಿ	ಮು.ಶಿ.	ನಿವೃತ್ತಿಯಿಂದ	01–10–2010	ನಿವೃತ್ತಿ	ಸಿ
3.	ಶಿವಮೊಗ್ಗ	ತೀರ್ಥಹಳ್ಳಿ	ಸರ್ಕಾರಿ ಪ್ರೌ ಶಾಲೆ ತೂದೂರು	ಮು.ಶಿ.	ನಿವೃತ್ತಿಯಿಂದ	01–09–2011	ನಿವೃತ್ತಿ	ಸಿ
4.	ಶಿವಮೊಗ್ಗ	ತೀರ್ಥಹಳ್ಳಿ	ಸರ್ಕಾರಿ ಪ್ರೌ ಶಾಲೆ ರಾಮಕೃಷ್ಣಾಮರ	ಮು.ಶಿ.	ವರ್ಗಾವಣೆಯಿಂದ	30–06–2010	ವರ್ಗಾವಣೆಯಿಂದ	ಸಿ
5.	ಶಿವಮೊಗ್ಗ	ತೀರ್ಥಹಳ್ಳಿ	ಸರ್ಕಾರಿ ಪ್ರೌ ಶಾಲೆ ಗುಡ್ಡೇಕೇರಿ	ಮು.ಶಿ.	ವರ್ಗಾವಣೆಯಿಂದ	20–09–2011	ವರ್ಗಾವಣೆಯಿಂದ	ಸಿ

ಕನ್ನಡ ಭಾಷಾ ಶಿಕ್ಷಕರು

1.	ಶಿವಮೊಗ್ಗ	ತೀರ್ಥಹಳ್ಳಿ	ಸರ್ಕಾರಿ ಪ್ರೌ. ಶಾಲೆ ಕೋಡ್ಲು	ಸಹ. ಶಿಕ್ಷಕರು	ಬಡ್ತಿಯಿಂದ		ಬಡ್ತಿಯಿಂದ	ಸಿ

ಸಿ.ಬಿ.ಝಡ್ ಶಿಕ್ಷಕರು

1.	ಶಿವಮೊಗ್ಗ	ತೀರ್ಥಹಳ್ಳಿ	ಸರ್ಕಾರಿ ಪ್ರೌಢ.ಶಾಲೆ ಕಾಲೇಜು ಮಳಲಿಮಕ್ಕಿ	ಸಹ. ಶಿಕ್ಷಕರು	ರಾಜೀನಾಮೆಯಿಂದ		ರಾಜೀನಾಮೆ	ಸಿ
2.	ಶಿವಮೊಗ್ಗ	ತೀರ್ಥಹಳ್ಳಿ	ಸರ್ಕಾರಿ ಪ್ರೌಢ.ಶಾಲೆ ಕೋಂಡ್ಲೂರು	ಸಹ. ಶಿಕ್ಷಕರು	ವರ್ಗಾವಣೆಯಿಂದ		ವರ್ಗಾವಣೆಯಿಂದ	ಸಿ
3.	ಶಿವಮೊಗ್ಗ	ತೀರ್ಥಹಳ್ಳಿ	ಸರ್ಕಾರಿ ಪ್ರೌಢ.ಶಾಲೆ ನೋಣಬೂರು	ಸಹ. ಶಿಕ್ಷಕರು	ವರ್ಗಾವಣೆಯಿಂದ		ವರ್ಗಾವಣೆಯಿಂದ	ಸಿ
4.	ಶಿವಮೊಗ್ಗ	ತೀರ್ಥಹಳ್ಳಿ	ಸರ್ಕಾರಿ ಪ್ರೌಢ.ಶಾಲೆ ಮೇಗರವಳ್ಳಿ	ಸಹ. ಶಿಕ್ಷಕರು	ವರ್ಗಾವಣೆಯಿಂದ	27-04-2011	ವರ್ಗಾವಣೆಯಿಂದ	ಸಿ
5.	ಶಿವಮೊಗ್ಗ	ತೀರ್ಥಹಳ್ಳಿ	ಸರ್ಕಾರಿ ಪ್ರೌಢ.ಶಾಲೆ ಬಾವಿಕೈನರು	ಸಹ. ಶಿಕ್ಷಕರು	ವರ್ಗಾವಣೆಯಿಂದ	27-04-2011	ವರ್ಗಾವಣೆಯಿಂದ	ಸಿ
6.	ಶಿವಮೊಗ್ಗ	ತೀರ್ಥಹಳ್ಳಿ	ಸರ್ಕಾರಿ ಪ.ದ.ಮೂ.ಕಾ ಆರಗ	ಸಹ. ಶಿಕ್ಷಕರು	ವರ್ಗಾವಣೆಯಿಂದ	27-04-2011	ವರ್ಗಾವಣೆಯಿಂದ	ಸಿ

ಪಿಸಿ.ಎಂ. ಶಿಕ್ಷಕರು

1.	ಶಿವಮೊಗ್ಗ	ತೀರ್ಥಹಳ್ಳಿ	ಸರ್ಕಾರಿ ಪ್ರೌಢ.ಶಾಲೆ ಕೊಡ್ಲೂರು	ಸಹ. ಶಿಕ್ಷಕರು	ವರ್ಗಾವಣೆಯಿಂದ	30-11-2010	ನಿವೃತ್ತಿ	ಸಿ
2.	ಶಿವಮೊಗ್ಗ	ತೀರ್ಥಹಳ್ಳಿ	ಸ.ಪ್ರ.ಶಲೆ ಕೋಣಂದೂರು	ಸಹ. ಶಿಕ್ಷಕರು	ಬಡ್ತಿಯಿಂದ		ಬಡ್ತಿಯಿಂದ	ಸಿ
3.	ಶಿವಮೊಗ್ಗ	ತೀರ್ಥಹಳ್ಳಿ	ಸ.ಪ.ಪೂ.ಕಾಲೇಜು ತೀರ್ಥಹಳ್ಳಿ	ಸಹ. ಶಿಕ್ಷಕರು	ಬಡ್ತಿಯಿಂದ	27-04-2011	ಬಡ್ತಿಯಿಂದ	ಎ
4.	ಶಿವಮೊಗ್ಗ	ತೀರ್ಥಹಳ್ಳಿ	ಸ.ಪ್ರೌ.ಶಾಲೆ ಗುಡ್ಡೇಕೇರಿ	ಸಹ. ಶಿಕ್ಷಕರು	ವರ್ಗಾವಣೆಯಿಂದ		ಬಿಡುಗಡೆಯಾಗಿಲಗಿಲ್ಲ	ಸಿ
5.	ಶಿವಮೊಗ್ಗ	ತೀರ್ಥಹಳ್ಳಿ	ಸ.ಪ್ರೌ.ಶಾಲೆ ಮಂಡಗದ್ದೆ	ಸಹ. ಶಿಕ್ಷಕರು	ವರ್ಗಾವಣೆಯಿಂದ		ವರ್ಗಾವಣೆಯಿಂದ	ಸಿ

ಹಿಂದಿ ಭಾಷಾ ಶಿಕ್ಷಕರು

1.	ಶಿವಮೊಗ್ಗ	ತೀರ್ಥಹಳ್ಳಿ	ಸರ್ಕಾರಿ ಪ್ರೌಢ.ಶಾಲೆ ಭಾವಿಕೈಸರು	ಸಹ. ಶಿಕ್ಷಕರು (ಹಿಂದಿ ಭಾಷೆ)	ವರ್ಗಾವಣೆಯಿಂದ	30-11-2010	ವರ್ಗಾವಣೆಯಿಂದ	ಸಿ

ಕರ್ನಾಟಕ ಸರ್ಕಾರ

ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ ನೃಪತುಂಗ ರಸ್ತೆ, ಬೆಂಗಳೂರು-1

ಸಂಖ್ಯೆ: ಸಿ4(1)ಪ್ರೌ.ಶಿ.ಅ.ಶಿ.ನೇ. 01/08-09, ದಿನಾಂಕ: 17-08-2011

ಜ್ಞಾಪನ

ವಿಷಯ: ರಾಜ್ಯದಲ್ಲಿನ ಸರ್ಕಾರಿ ಪ್ರೌಢಶಾಲೆಗಳಲ್ಲಿ ಖಾಲಿಯಿರುವ ಸಹ ಶಿಕ್ಷಕರು ಗ್ರೇಡ್-2 ಹುದ್ದೆಗಳಿಗೆ ಗೌರವಧನ ಆಧಾರದ ಮೇಲೆ ತಾತ್ಕಾಲಿಕವಾಗಿ ಅತಿಥಿ ಶಿಕ್ಷಕರನ್ನು ನೇಮಕ ಮಾಡುವ ಬಗ್ಗೆ.

ಉಲ್ಲೇಖ: 1. ಸರ್ಕಾರಿ ಆದೇಶ ಸಂಖ್ಯೆ: ಇಡಿ 138 ಯೋಯೋಕ 2010 ಬೆಂಗಳೂರು, ದಿನಾಂಕ: 20-9-2010 ಹಾಗು ದಿನಾಂಕ: 13-12-2010.

2. ಈ ಕಛೇರಿ ಪತ್ರ ಸಮಸಂಖ್ಯೆ: ದಿನಾಂಕ: 30-06-2011 ಹಾಗೂ 03-08-2011

3. ಸರ್ಕಾರಿ ಆದೇಶ ಸಂಖ್ಯೆ: ಇಡಿ 114 ಯೋಯೋಕ 2011 ಬೆಂಗಳೂರು, ದಿನಾಂಕ: 11-08-2011.

ರಾಜ್ಯದಲ್ಲಿನ ಸರ್ಕಾರಿ ಪ್ರೌಢಶಾಲೆಗಳಲ್ಲಿ ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಖಾಲಿಯಿರುವ ಸಹ ಶಿಕ್ಷಕರು ಗ್ರೇಡ್-2 ಹುದ್ದೆಗಳಿಗೆ ಖಾಯಂ ಶಿಕ್ಷಕರ ನೇಮಕಾತಿ ಆಗುವವರೆಗೆ ಅಥವಾ 2011-12ನೇ ಸಾಲಿನ ಶೈಕ್ಷಣಿಕ ವರ್ಷದ ಅಂತ್ಯದವರೆಗೆ ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಗೌರವಧನದ ಆಧಾರದ ಮೇಲೆ ಅತಿಥಿ ಶಿಕ್ಷಕರನ್ನು ತಾತ್ಕಾಲಿಕವಾಗಿ ನೇಮಕಾತಿ ಮಾಡಿಕೊಳ್ಳಲು ಉಲ್ಲೇಖ (3)ರ ಸರ್ಕಾರಿ ಆದೇಶ ಸಂಖ್ಯೆ: ಇಡಿ 114 ಯೋಯೋಕ 2011 ಬೆಂಗಳೂರು, ದಿನಾಂಕ: 11-08-2011 ರಲ್ಲಿ 2130 (ಎರಡು ಸಾವಿರದ ನೂರ ಮೂವತ್ತು) ಹುದ್ದೆಗಳಿಗೆ ಅತಿಥಿ ಶಿಕ್ಷಕರನ್ನು ತಾತ್ಕಾಲಿಕವಾಗಿ ನೇಮಕಾತಿ ಮಾಡಿಕೊಳ್ಳಲು ಅನುಮತಿ ನೀಡಿದೆ. ಸರ್ಕಾರದ ಆದೇಶವನ್ನು ಅನುಬಂಧಿಸಿದೆ.

ಪ್ರತಿ ಜಿಲ್ಲೆಗೆ ಅನುಬಂಧ 'ಅ' ನಲ್ಲಿ ನಿಗದಿಪಡಿಸಿರುವಂತೆ ಅತಿಥಿ ಗೌರವಧನದ ಆಧಾರದ ಮೇಲೆ ಈ ಕೆಳಕಂಡ ಷರತ್ತುಗಳನ್ವಯ ತಾತ್ಕಾಲಿಕವಾಗಿ ನೇಮಕಾತಿ-ಮಾಡುವ ಬಗ್ಗೆ ಕ್ರಮವಹಿಸಲು ತಿಳಿಸಿದೆ.

ಷರತ್ತುಗಳು

1. ಮಂಜೂರಾದ ಖಾಲಿ ಹುದ್ದೆಗಳಿಗೆ ಮಾತ್ರ ಅತಿಥಿ ಶಿಕ್ಷಕರನ್ನು ನೇಮಕ ಮಾಡಿಕೊಳ್ಳತಕ್ಕದ್ದು.
2. ಪ್ರತಿ ಅತಿಥಿ ಶಿಕ್ಷಕರು ನಿಗದಿಪಡಿಸಲಾದ ಬೋಧನಾ ವಾತ್ರ ಕಾರ್ಯನಿರ್ವಹಿಸತಕ್ಕದ್ದು.
3. ಈ ಅತಿಥಿ ಶಿಕ್ಷಕರ ಸೇವೆಯನ್ನು ಖಾಯಂ ಶಿಕ್ಷಕರ ನೇಮಕಾತಿ ಆಗುವವರೆಗೆ ಅಥವಾ 2011-12 ನೇ ಸಾಲಿನ ಶೈಕ್ಷಣಿಕ ವರ್ಷದ ಅಂತ್ಯದವರೆಗೆ ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಮಾತ್ರ ಬಳಸಿಕೊಳ್ಳತಕ್ಕದ್ದು.
4. ಸರ್ಕಾರದ ನಿಯಮಗಳನ್ವಯ ಈ ಅವಧಿಯಲ್ಲಿ ಖಾಯಂ ಶಿಕ್ಷಕರು ನೇಮಕಾತಿ ಹೊಂದಿ ಕರ್ತವ್ಯಕ್ಕೆ ಹಾಜರಾದ ತಕ್ಷಣ ಅತಿಥಿ ಶಿಕ್ಷಕರ ಕಾರ್ಯನಿರ್ವಹಣೆಯು ತಂತಾನೆ ರದ್ದಾಗುತ್ತದೆ.

5. ಶಿಕ್ಷಕರೇ ಇಲ್ಲದಿರುವ ಸ್ಥಳದಲ್ಲಿ ಹಾಗೂ ನಿಯೋಜನೆಯಂತಹ ಬದಲಿ ವ್ಯವಸ್ಥೆ ಮಾಡಲು ಸಾಧ್ಯವಿಲ್ಲದಿರುವ ಸ್ಥಳದಲ್ಲಿ ಮಾತ್ರ ಅತಿಥಿ ಶಿಕ್ಷಕರನ್ನು ತಾತ್ಕಾಲಿಕವಾಗಿ ನೇಮಕ ಮಾಡಕೊಳ್ಳತಕ್ಕದ್ದು.

6. ಪ್ರತಿ ಅತಿಥಿ ಶಿಕ್ಷಕರಿಗೆ ಪ್ರತಿ ದಿನಕ್ಕೆ ರೂ. 125/– ಗಳಮತೆ ತಿಂಗಳಿಗೆ ಗರಿಷ್ಟ ರೂ. 3000/– ಗಳಿಗೆ ಮೀರದಂತೆ ಗೌರವಧನ ನೀಡುವುದು.

7. ಅತಿಥಿ ಶಿಕ್ಷಕರ ಸೇವೆಯನ್ನು ಬಳಸಿಕೊಳ್ಳುವಾಗ ಅವರಿಗೆ ಸಕ್ಷಮ ಪ್ರಾಧಿಕಾರದ ಆದೇಶವಿಲ್ಲದೆ ಯಾವುದೇ ಆದೇಶವನ್ನು ನೀಡಬಾರದು.

8. ಅತಿಥಿ ಶಿಕ್ಷಕರ ಹೆಸರುಗಳನ್ನು ಖಾಯಂ ಶಿಕ್ಷಕರ ಹಾಜರಾತಿ ವಹಿಯಲ್ಲಿ ನಮೂದಿಸಬಾರದು. ಗೌರವಧನ ವಿತರಣೆ ಮಾಡಿದ್ದಕ್ಕೆ ಅವರಿಂದ ರಸೀದಿಯನ್ನು ಪಡೆಯತಕ್ಕದ್ದು.

9. ಅತಿಥಿ ಶಿಕ್ಷಕರಿಗೆ ಯಾವುದೇ ರೀತಿಯ ಸೇವಾ ಪ್ರಮಾಣ ಪತ್ರವನ್ನು ನೀಡುವಂತಿಲ್ಲ. ಹಾಜರಾತಿ ಪುಸ್ತಕವನ್ನು ಮುಖ್ಯ ಶಿಕ್ಷಕರೇ ನಿರ್ವಹಿಸತಕ್ಕದ್ದು. ಯಾವುದೇ ಕಾರಣಕ್ಕೂ ಸೇವಾ ಪುಸ್ತಕವನ್ನು ತೆರೆಯಬಾರದು. ಶೈಕ್ಷಣಿಕ ವರ್ಷದ ಅಂತ್ಯದಲ್ಲಿ ಅವರನ್ನು ತಪ್ಪದೇ ಬಿಡುಗಡೆ ಮಾಡತಕ್ಕದ್ದು.

10. ಈ ರೀತಿ ನೇಮಕ ಮಾಡಲಾಗುವ ಶಿಕ್ಷಕರು ಅತಿಥಿ ಶಿಕ್ಷಕರಾಗಿ ಸಲ್ಲಿಸಲಿರುವ ಸೇವೆಯನ್ನು ಇತರೆ ಯಾವುದೇ ಸೇವಾ ಸಕ್ರಮಾತಿಗೆ ಪರಿಗಣಿಸತಕ್ಕದ್ದಲ್ಲ.

11. ಅತಿಥಿ ಶಿಕ್ಷಕರು ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ನಿಗದಿಪಡಿಸಿದ ವಿದ್ಯಾರ್ಹತೆ ಹೊಂದಿರಬೇಕು.

12. ಅತಿಥಿ ಶಿಕ್ಷಕರುಗಳನ್ನು ಸಂಬಂಧಪಟ್ಟ ಸರ್ಕಾರಿ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರು ನೇಮಕಾತಿ ಪ್ರಾಧಿಕಾರವೆಂದು ಗುರುತಿಸಿ ನೇಮಕಾತಿ ಮಾಡಕೊಳ್ಳಲು ಅಧಿಕಾರ ನೀಡಲಾಗಿದೆ. ಅವರು ಸ್ಥಳೀಯ ಅರ್ಹ ಶಿಕ್ಷಕರಿಗೆ ಆದ್ಯತೆ ನೀಡುವುದು.

13. ಅತಿಥಿ ಶಿಕ್ಷಕರಿಗೆ ಪಾವತಿಸುವ ಗೌರವಧನವನ್ನು ಜಿಲ್ಲಾವಲಯದಡಿ ಸರ್ಕಾರಿ ಪ್ರೌಢಶಾಲೆಗಳಡಿಯಲ್ಲಿ 2011–12ನೇ ಸಾಲಿಗೆ ನಿಗದಿಪಡಿಸಿರುವ ಅನುದಾನದಲ್ಲಿಯೇ ಭರಿಸತಕ್ಕದ್ದು.

ನಿರ್ದೇಶಕರು
(ಪ್ರೌಢಶಿಕ್ಷಣ)

ಶ್ರೀ ಕಿಮ್ಮನೆ ರತ್ನಾಕರ: ಮಾನ್ಯ ಅಧ್ಯಕ್ಷರೆ, ಉತ್ತರ ಕೊಟ್ಟಿದ್ದಾರೆ, ವಾಸ್ತವದಲ್ಲಿ ಅವರು ಕೊಟ್ಟಿರುವ ಉತ್ತರದಲ್ಲಿ state ratio ಹಿಡಿದುಕೊಂಡು ನಮಗೊಂದು ಉತ್ತರವನ್ನು ಕೊಟ್ಟಿದ್ದಾರೆ. ತೀರ್ಥಹಳ್ಳಿಯ ಇಡೀ ಕ್ಷೇತ್ರದಲ್ಲಿ 235 ಜನ ಟೀಚರ್ಸ್ ಇಲ್ಲ. ನೀವು ಕೊಟ್ಟಿರುವುದು, ಏನು, 30–40 ಜನ ವಿದ್ಯಾರ್ಥಿಗಳಿಗೆ ಒಬ್ಬ ಟೀಚರ್ ಎಂದು ಸರ್ಕಾರ ತೀರ್ಮಾನ ಮಾಡಿಕೊಂಡಿದೆ ಅದರ ಆಧಾರದ ಮೇಲೆ 35 ಜನ ಇಲ್ಲವೆಂದು ಹೇಳಿ. ಒಟ್ಟಾಗಿ ಒಂದು ತಾಲ್ಲೂಕಿನಲ್ಲಿ 135 ಜನರಿಲ್ಲ ಇಡೀ ಕ್ಷೇತ್ರದಲ್ಲಿ 235 ಜನರಿಲ್ಲ, ಶಾಲೆಗಳನ್ನು ಮುಚ್ಚಿಬಿಡುವುದು ಒಳ್ಳೆಯದು. ನಮಗೆ ಎಷ್ಟು ತೊಂದರೆಯಾಗುತ್ತಿದೆ ಎಂದರೆ, ಪ್ರತಿದಿನ ಬೆಳಿಗ್ಗೆ SDMC ಅವರು ನಮಗೆ ಟೀಚರ್ಸ್ ಕೊಡಿ ಎಂದು ಬಂದು ಶಾಸಕರ ನಿಂದನೆ ಮಾಡುತ್ತಾರೆ. ನಮ್ಮದು ಮಲೆನಾಡು ಏರಿಯಾ, ತಮಗೆ ನಮ್ಮ ಪರಿಸ್ಥಿತಿ ಗೊತ್ತಿದೆ, ಟೀಚರ್ಸ್ ಇಲ್ಲ. ಈ ರೀತಿಯ ತೀರ್ಮಾನದಿಂದಾಗಿ ಇವತ್ತು ಪ್ರಾಥಮಿಕ ಶಾಲೆಯ ಹಂತದಲ್ಲಿ ರಾಜ್ಯದಲ್ಲಿ ಪ್ರೈಮರಿ ಸ್ಕೂಲ್ ಶಿಕ್ಷಣ ಹಾಳಾಗುತ್ತಿದೆ. ಇವತ್ತು ಖಾಸಗಿ ಶಾಲೆಗೆ ಮಕ್ಕಳು ಏತಕ್ಕೆ ಹೋಗುತ್ತಾರೆ? ಬರೀ ಅಕ್ಕಿ ಕೊಟ್ಟರೆ ಆಯಿತು, ಭತ್ತ ಕೊಟ್ಟರೆ ಆಯಿತು, ಊಟ ಕೊಟ್ಟರೆ ಆಯಿತು, ಬಿಲ್ಡಿಂಗ್ ಕೊಟ್ಟರೆ ಆಯಿತು ಎಂದರೆ, ಪಾಠ ಹೇಳುವುದಕ್ಕೆ ಮಾಸ್ಟರೇ ಇಲ್ಲದಿದ್ದರೆ ಅವೆಲ್ಲ ಏತಕ್ಕಾಗಿ? ಶಾಲೆಯನ್ನು Close ಮಾಡುವುದು ಒಳ್ಳೆಯದು. ನಮ್ಮ ತಾಲ್ಲೂಕಿನಲ್ಲಿ ಇವತ್ತು 48 ಜನರನ್ನು ವರ್ಗಾವಣೆ ಮಾಡಿದ್ದಾರೆ, ಎಲ್ಲ ನಮ್ಮ ಮಿತ್ರ ಶಾಸಕರು, ವರ್ಗಾವಣೆಗೆ consent ಕೊಡಿ, ನಿಮ್ಮ BEOಗೆ ಒಂದು ಮಾತು ಹೇಳಿ ಎರಡು ಲೆಟರ್ ಕೊಡುತ್ತಾರೆ. SDMC ಅವರು ನನ್ನ ಕಛೇರಿ ಹತ್ತಿರ ಬಂದು strike ಮಾಡುತ್ತಾರೆ. ನೀವು ಇದರಲ್ಲಿ ಪರಿಹಾರವನ್ನು ಹೇಳಿದ್ದೀರಾ, ಆದರೆ ಅಲ್ಲಿನ ಬಿಇಒ ಕೇಳಿದರೆ ಪ್ರತ್ಯೇಕವಾಗಿ ತೆಗೆದುಕೊಳ್ಳುವುದಕ್ಕೆ ಅವಕಾಶವಿಲ್ಲವೆಂದು ಹೇಳುತ್ತಾರೆ. ಕೇಳಿದರೆ, ನಿವೃತ್ತ ಶಿಕ್ಷಕರನ್ನು ತೆಗೆದುಕೊಳ್ಳುವುದೆಂದು ಹೇಳುತ್ತಾರೆ. ನಿವೃತ್ತ ಶಿಕ್ಷಕ ಬರುವುದಕ್ಕೆ ಗ್ರಹಚಾರ ಹಿಡಿದಿಲ್ಲ. ನಿವೃತ್ತರಾದ 60 ವರ್ಷದ ಶಿಕ್ಷಕ ಅಲ್ಲಿ ಬಂದು ಪಾಠ ಹೇಳಲು ತಯಾರಿಲ್ಲ ಕೊನೆಯಪಕ್ಷ SDMCಗಾದರೂ ಅಧಿಕಾರವನ್ನು ಕೊಡಿ, ನಾವಾದರೂ ನೇಮಕ ಮಾಡಕೊಳ್ಳುತ್ತೇವೆ, ಕೊನೆಯಪಕ್ಷ ಅದರ ಹಣವನ್ನಾದರೂ ಕೊಡಬಹುದು. ನೀವು, ನಮಗೆ SDMCಯವರು ನೇಮಕ ಮಾಡಿಕೊಳ್ಳಲು ಅವಕಾಶ ಕೊಡುವುದಿಲ್ಲ, ಉತ್ತರದಲ್ಲಿ ಮಾಡುವುದಕ್ಕೆ ಅವಕಾಶವಿದೆ ಎಂದು ಹೇಳಿದ್ದಾರೆ. ಇಲ್ಲವೆಂದರೆ, ನಮ್ಮಲ್ಲಿ, ಶಾಲೆಗಳನ್ನು close ಮಾಡಿಬಿಡಿ, ಏತಕ್ಕೆ ಮಕ್ಕಳು ಶಾಲೆಗೆ ಬರುವುದು ಕಡಿಮೆಯಾಗುತ್ತಿದ್ದಾರೆಂದರೆ, ಮೊದಲು ಒಂದು ವಾದವಿತ್ತು. ಊಟ ಕೊಟ್ಟರೆ ಸಾಕು ಬಟ್ಟೆ ಕೊಟ್ಟರೆ ಸಾಕು, ಪುಸ್ತಕ ಕೊಟ್ಟರೆ ಸಾಕು. ಆದರೆ ಇವತ್ತು

ಅದು ಮಾತ್ರವಲ್ಲ, ವಿದ್ಯೆ ಹೇಳಿಕೊಡುವ ಟೀಚರ್ಸ್ ಇಲ್ಲದಿದ್ದರೆ, ಅವು ಏತಕ್ಕೂ ಬೇಕಾಗಿಲ್ಲ, ಅವರೆಲ್ಲಾ ಖಾಸಗಿ ಶಾಲೆಗೆ ಹೋಗುತ್ತಾರೆ. ಉದಾಹರಣೆ ಹೇಳುತ್ತೇನೆ, ಇವತ್ತು ಒಂದನೇ ತರಗತಿಯಿಂದ ಏಳನೇ ತರಗತಿಯವರೆಗೆ ಹೆಬ್ಬಳಿಬಯಲೆಂದು ಯಡಿಯೂರು ಗ್ರಾಮ ಪಂಚಾಯತಿಯಲ್ಲಿ ಒಬ್ಬರೆ ಶಿಕ್ಷಕರಿದ್ದಾರೆ, 1–7ನೇ ತರಗತಿಯ ಯಾವ ಮಕ್ಕಳಿಗೆ ಪಾಠ ಹೇಳಿಕೊಡುತ್ತಾರೆಂದು ನನಗೆ ಹೇಳಬೇಕು.

(ಗೊಂದಲ)

ಮಾನ್ಯ ಸದಸ್ಯರೊಬ್ಬರು: ಮಾನ್ಯ ಅಧ್ಯಕ್ಷರೆ, ಇದು ಮಾನ್ಯ ಸದಸ್ಯರೊಬ್ಬರ ಸಮಸ್ಯೆ ಅಲ್ಲ ಎಲ್ಲಾ ಕಡೆ ಈ ಸಮಸ್ಯೆ ಇದೆ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷ ನಾಯಕರು): ಈಗ ಪ್ರೈಮರಿ ಶಾಲೆಗಳಲ್ಲಿ ಉಪಾಧ್ಯಾಯರಿಲ್ಲವೆನ್ನುವ ದೊಡ್ಡ ಕೊರತೆ ಇದೆ. ಅದರಲ್ಲೂ ಎಲ್ಲಿ backward area ಇದೆ ಅಲ್ಲಿಯ ಹಳ್ಳಿಗಳು ಪಟ್ಟಣಗಳಿಂದ ದೂರ ಇವೆ. ಪಟ್ಟಣದಲ್ಲೇ ಮೇಸ್ಟ್ರುಗಳೆಲ್ಲಾ ಎಲ್ಲಾ concentrate ಮಾಡಿಕೊಂಡಿಬಿಟ್ಟಿರುತ್ತಾರೆ, ಆದರೆ ಹಳ್ಳಿಗಳಲ್ಲಿ ಮೇಸ್ಟ್ರುಗಳಿರುವುದಿಲ್ಲ. ಮೇಸ್ಟ್ರುಗಳು ಇಲ್ಲದೆ quality education ಹೇಗೆ ಬರುತ್ತದೆ? Quality education ಇರಬೇಕಾದರೆ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಏನು ಒಂದು ಅನುಪಾತ ಇದೆ ಅದಕ್ಕನುಗುಣವಾಗಿ ಮೇಸ್ಟ್ರುಗಳು ಇರಲೇಬೇಕು. ನಾವು ಇದ್ದಾಗ 1994 ರಲ್ಲಿ ಮಾನ್ಯ ಗೋವಿಂದೇಗೌಡರು Primary Education Minister ಆಗಿದ್ದರು. ಅವರು ಒಂದು ಲಕ್ಷ ಚಿಲ್ಲರೆ ಉಪಾಧ್ಯಾಯರುಗಳನ್ನು ನೇಮಕ ಮಾಡಿದರು. ಪ್ರತಿ ವರ್ಷ 20 ಸಾವಿರದಿಂದ 25 ಸಾವಿರ ಮೇಸ್ಟ್ರುಗಳನ್ನು ನೇಮಕ ಮಾಡಿದರು. ಖಾಲಿ ಹುದ್ದೆಗಳು ಬೇರೆ ಇದ್ದವು. ಅವೆಲ್ಲವನ್ನೂ ಭರ್ತಿ ಮಾಡಿದರು. ನೀವು primary education ಮೇಸ್ಟ್ರುಗಳಿಗೆ ಭರ್ತಿ ಮಾಡದೇ ಮೀನಮೇಷ ಎಣಿಸಿ ಸರ್ಕಾರ ಹಣ ಕೊಡಲಿಲ್ಲ. ಆರ್ಥಿಕ ಇಲಾಖೆಯವರು ಒಪ್ಪಲಿಲ್ಲವೆಂದು ಈ ತರಹ ಮೀನಾಮೇಷ ಎಣಿಸಿದರೆ ಬಹಳ ಕೆಟ್ಟ ಹೆಸರು ಬರುತ್ತದೆ. ಒಂದು ಕಡೆ ಕೇಂದ್ರ ಸರ್ಕಾರದಲ್ಲಿ Right to Education Bill ಅನ್ನು ಪಾಸ್ ಮಾಡಿದ್ದೀರಿ. ಕಡ್ಡಾಯವಾಗಿ ಎಲ್ಲರಿಗೂ ಶಿಕ್ಷಣ ಕೊಡಬೇಕೆನ್ನುವುದು ಒಂದು ಕಡೆ. ಇನ್ನೊಂದು ಕಡೆ ಮೇಸ್ಟ್ರುಗಳು ಇಲ್ಲ ಶಾಲೆಗಳು ಮುಚ್ಚುತ್ತೇವೆ, ಐದು ವಿದ್ಯಾರ್ಥಿಗಳಿಗಿಂತ ಕಡಿಮೆ ಇರತಕ್ಕಂತಹ ಎಲ್ಲಾ ಕನ್ನಡ ಶಾಲೆಗಳನ್ನು ಮುಚ್ಚಿಬಿಡುತ್ತೇವೆ ಎನ್ನತಕ್ಕಂಥದ್ದು ಎಷ್ಟು ವಿರೋಧಾಭಾಸ ನೋಡಿ. ಇದು ಬಹಳ ಮಹತ್ವದ ವಿಚಾರ ಇದೆ. ನೀವು ಉಪಾಧ್ಯಾಯರನ್ನು ಕೂಡಲೇ ನೇಮಕ ಮಾಡಿಕೊಳ್ಳಬೇಕು. ನಾನು ಇದನ್ನು ಹೆಚ್ಚಿಗೆ ಎಳೆಯುವುದಕ್ಕೆ ಹೋಗುವುದಿಲ್ಲ.

ನೀವು ಅರ್ಧಗಂಟೆ ಕಾಲಾವಧಿ ಚರ್ಚೆಗೆ ಹಾಕಿ. ಇದನ್ನು ಚರ್ಚೆ ಮಾಡಿ ಇದಕ್ಕೆ ಒಂದು ಪರಿಹಾರ ಕಂಡುಹಿಡಿಯಲೇ ಬೇಕು. ಸರ್ಕಾರ ಇದಕ್ಕೆ ಪರಿಹಾರ ಕಂಡುಹಿಡಿಯಲೇ ಬೇಕಾಗುತ್ತದೆ. ಇಲ್ಲಿದಿದ್ದರೆ ಹಳ್ಳಿಗಾಡಿನ ಮಕ್ಕಳು ಹಾಗೂ ಬಡವರ ಮಕ್ಕಳಿಗೆ ಶಿಕ್ಷಣ ಸಿಗುವುದಿಲ್ಲ.

ಅಧ್ಯಕ್ಷರು: ಅರ್ಧ ಗಂಟೆ ಚರ್ಚೆಗೆ ಕೇಳುತ್ತಿದ್ದಾರೆ ಚರ್ಚೆ ಮಾಡೋಣ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ಚರ್ಚೆಗೆ ಅವಕಾಶ ಕೊಡುವುದು ಅಗತ್ಯವಿದೆ. ಚರ್ಚೆ ಮಾಡೋಣ ಅದರಲ್ಲೇನೋ ಅಭ್ಯಂತರವಿಲ್ಲ. ಒಂದೇ ಒಂದು ನಾನು ಈ ಸಂದರ್ಭದಲ್ಲಿ ಪ್ರಸ್ತಾಪಿಸುವುದಕ್ಕೆ ಬಯಸುವುದೇನೆಂದರೆ, ಶಿಕ್ಷಣ ನಮ್ಮ ಸರ್ಕಾರದ ಆದ್ಯತೆಯ ಕ್ಷೇತ್ರ. ಅರ್ಧ ಗಂಟೆ ಕಾಲ ಚರ್ಚೆ ಮಾಡುವುದರಲ್ಲಿ ನನ್ನದೇನೂ ಅಭ್ಯಂತರವಿಲ್ಲ. ನಮ್ಮ ಸರ್ಕಾರದ ಆಧ್ಯತೆಯ ಕ್ಷೇತ್ರ ಶಿಕ್ಷಣ ಕ್ಷೇತ್ರ ಇದೆ. ಕಳೆದ ಮೂರುವರೆ ವರ್ಷಗಳಿಂದಲೂ ಸಹ ಹಿಂದಿನ ಮಾನ್ಯ ಮುಖ್ಯ ಮಂತ್ರಿಗಳಾಗಿದ್ದ ಮಾನ್ಯ ಯಡಿಯೂರಪ್ಪನವರೂ ಸಹ ಶಿಕ್ಷಣ ಇಲಾಖೆಗೆ ಸಾಕಷ್ಟು ಪ್ರೋತ್ಸಾಹವನ್ನು ಕೊಟ್ಟಿದ್ದಾರೆ. ಇವತ್ತಿನ ಮುಖ್ಯಮಂತ್ರಿಗಳಾದ ಮಾನ್ಯ ಸದಾನಂದಗೌಡರೂ ಕೂಡ ಸಾಕಷ್ಟು ಆದ್ಯತೆ ಕೊಟ್ಟಿದ್ದಾರೆ. ಶಿಕ್ಷಣ ಕ್ಷೇತ್ರದ ಪ್ರಾಮುಖ್ಯತೆಯನ್ನು ಅರಿತಿರುವ ನಮ್ಮ ಸರ್ಕಾರ ಎಲ್ಲಾ ರೀತಿಯ ಸೌಲಭ್ಯಗಳನ್ನು ಕೊಡುವಂತಹ ಪ್ರಯತ್ನವನ್ನು ಮಾಡುತ್ತಿದ್ದೇವೆ. ಇಲ್ಲಿ ಈಗ ಚರ್ಚೆಗೆ ಬಂದಿರುವುದು ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಶಿಕ್ಷಕರ ಕೊರತೆ. ಮಾನ್ಯ ಅಧ್ಯಕ್ಷರೆ ನಾವು R.T.E.ಯನ್ನು ಒಪ್ಪಿಕೊಳ್ಳುವುದಕ್ಕೆ ಮೊದಲು 1:40 ratio ಇಡೀ ದೇಶದಲ್ಲಿ ಶಿಕ್ಷಕರ ವಿದ್ಯಾರ್ಥಿಗಳ ಅನುಪಾತಕ್ಕೆ ನಮಗೆ ಹೇಳಿತ್ತು. ಇಡೀ ದೇಶದಲ್ಲಿಯೇ 1:40 ಇರುವಾಗ ನಾವು R.T.E.ಯನ್ನು ಒಪ್ಪಿಕೊಂಡು 1:30 ಮಾಡಬೇಕಾದ ಹಿನ್ನೆಲೆಯಲ್ಲಿ ನಮ್ಮ ರಾಜ್ಯ ಬಹಳ ಮುಂದುವರೆದ ರಾಜ್ಯ. ಶೈಕ್ಷಣಿಕವಾಗಿ ಪ್ರಾಮುಖ್ಯತೆ ಕೊಟ್ಟಿದ್ದೇವೆಂದು ಹೇಳುವುದಕ್ಕೆ ನಮ್ಮ ರಾಜ್ಯದಲ್ಲಿ 1:28 ಇದೆ. ದೇಶ ಯಾವಾಗ 1:30 ಎಂದು ಹೇಳಿದೆ ಅದಕ್ಕಿಂತ ಮೊದಲು ನಾವು 1:28 ಇದ್ದೇವೆ.

ಶ್ರೀ ಸಿದ್ದರಾಮಯ್ಯ: ಇದು ಇಡೀ ರಾಜ್ಯಕ್ಕೆ ಸಂಬಂಧಪಟ್ಟಿದ್ದು. Education Concurrent List ನಲ್ಲಿ ಇರುವುದು. It is not the responsability of the Central Government alone. ಅವರನ್ನೇ ಕೇಳಬೇಕೆಂದೇನೂ ಇಲ್ಲ. concurrent List ನಲ್ಲಿರುವುದರಿಂದ the State Government, in the interest of the state, in the

interest of the children of karnataka may take any decision. The Karnataka Government need not follow strictly any direction given by the Government of India and it is not mandatory, also.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಕೇಂದ್ರ ಸರ್ಕಾರ ಹೇಳಿರುವುದಕ್ಕಿಂತಲೂ ಉತ್ತಮವಾದ ರೀತಿಯಲ್ಲಿ ನಾವು ರಾಜ್ಯ ಸರ್ಕಾರದಲ್ಲಿ ನಿರ್ಣಯ ತೆಗೆದುಕೊಂಡಿದ್ದೇವೆ.

ಶ್ರೀ ಕೆ.ಎಸ್. ಈಶ್ವರಪ್ಪ: ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಉತ್ತರ ಕೊಡುವುದಕ್ಕೂ ಬಿಡಲಿಲ್ಲವೆಂದರೆ ಹೇಗೆ? ಅವರು ಅವರ ಉತ್ತರ ಪೂರ್ಣ ಮಾಡುವುದಕ್ಕೆ ಬಿಡಿ.

ಶ್ರೀ ಸಿದ್ದರಾಮಯ್ಯ: ಅರ್ಧ ಗಂಟೆ ಕಾಲ ಚರ್ಚೆಗೆ ಅವಕಾಶ ಕೊಟ್ಟಿದ್ದಾರೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಸಭಾಧ್ಯಕ್ಷರೆ, ಕೇಂದ್ರ ಸರ್ಕಾರ ಯಾವೆಲ್ಲಾ ನೀತಿ ನಿಯಮಗಳನ್ನು ಹೇಳಿದೆಯೋ ಅದಕ್ಕಿಂತಲೂ ಒಂದು ಹೆಜ್ಜೆ ಮುಂದೆ ಇದ್ದು ನಾವು ಶಿಕ್ಷಣಕ್ಕೆ ಆದ್ಯತೆಯನ್ನು ಕೊಟ್ಟು ಕೆಲಸ ಮಾಡಿದ್ದೇವೆ. ಆ ಹಿನ್ನೆಲೆಯಲ್ಲಿ 1:28 ಇದೆ. ತೀರ್ಥಹಳ್ಳಿಯಲ್ಲಿ ನಮ್ಮ ಹತ್ತಿರ ಅಂಕಿ ಸಂಖ್ಯೆಗಳು ಸಂಖ್ಯೆಗಳು ಎಲ್ಲವೂ ಇವೆ. LPS ಒಂದರಿಂದ ಐದನೇ ತರಗತಿವರೆಗೆ 1:11 ಇದೆ. 11 ಮಕ್ಕಳಿಗೆ ಒಬ್ಬ ಅಧ್ಯಾಪಕರಿದ್ದರೆ. HPS ನಲ್ಲಿ 1:16 ಇದೆ. 16 ಮಕ್ಕಳಿಗೆ ಒಬ್ಬ ಅಧ್ಯಾಪಕರಿದ್ದಾರೆ. ಶಿವಮೊಗ್ಗ ಜಿಲ್ಲೆಯಲ್ಲಿ 1:19 ಇದೆ. 19 ಮಕ್ಕಳಿಗೆ ಒಬ್ಬ ಶಿಕ್ಷಕರಿದ್ದಾರೆ. ಇಡೀ ಸ್ಟೇಟ್‌ನಲ್ಲಿ average 1:28 ಇದೆ. 1:30 ಎಂದು Central Government ಹೇಳುತ್ತದೆ. ನಾವು ಬಹಳ ಮುಂದುವರೆದ ರೀತಿಯಲ್ಲಿ ಶಿಕ್ಷಣವನ್ನು ಕೊಡುತ್ತಿದ್ದೇವೆ. ಆದಾಗ್ಯೂ ಕೊರತೆಗಳಿವೆ. ನಾನು ಹೇಳುವ ತನಕ ಸ್ವಲ್ಪ ಸಮಾಧಾನದಿಂದ ಕೇಳಿ. ಕೊರತೆಗಳು ಏಕೆ ಇವೆ ಎಂದರೆ, ಮಲೆನಾಡು, ಕರಾವಳಿ ಹಾಗೂ ಬಯಲು ಸೀಮೆ ಜಿಲ್ಲೆಗಳಲ್ಲಿ ಎಲ್ಲಾ ರೀತಿಯಿಂದಲೂ ಒಂದೇ ರೀತಿಯ ಅಳತೆಗೋಲನ್ನು ಇಡುವುದಕ್ಕೆ ಬರುವುದಿಲ್ಲ. ತೀರ್ಥಹಳ್ಳಿ ಮಲೆನಾಡಿನ ಜಿಲ್ಲೆಗಳಲ್ಲಿ ಬರುತ್ತದೆ. ಇಲ್ಲಿ LPS ಮತ್ತು HPSಗಳಲ್ಲಿ 1:11 ಹಾಗೂ 1:16 ಇದೆ. ಬಯಲು ಸೀಮೆ ಪ್ರದೇಶಗಳಲ್ಲಿ ಸ್ವಲ್ಪ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗುತ್ತದೆ. ಇದೊಂದು ತಾರತಮ್ಯವನ್ನು ಸರಿಪಡಿಸುವ ಹಿನ್ನೆಲೆಯಲ್ಲಿ ಶಿಕ್ಷಕರ ವರ್ಗಾವಣೆ ನೀತಿಯನ್ನು ಕಟ್ಟು ನಿಟ್ಟಾಗಿ ಇಡೀ ದೇಶದಲ್ಲಿಯೇ ಕರ್ನಾಟಕದಲ್ಲಿ ಮೊಟ್ಟ ಮೊದಲ ಬಾರಿಗೆ ತಂದಿದ್ದೇವೆ. ಹಾಗಾಗಿ ನಿಮ್ಮ ಸರ್ಕಾರದಲ್ಲಿ ಆಗುತ್ತಿದ್ದ ಹಾಗೆ ಮನಸೋ ಇಚ್ಛೆ ವರ್ಗಾವಣೆಗಳು ಆಗುವ ಆಗಿಲ್ಲ.

ಶ್ರೀ ಸಿದ್ದರಾಮಯ್ಯ: ಮಾನ್ಯ ಗೋವಿಂದೇಗೌಡ ಕಾಲದಲ್ಲಿ ಹೇಗಿತ್ತು ಎಂದು ತೆಗೆದು ನೋಡಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಭೌಗೋಳಿಕವಾಗಿ ಕೆಲವು ಪ್ರದೇಶಗಳಲ್ಲಿ ಏನು ಬದಲಾವಣೆ ಮಾಡಬೇಕು ಅದನ್ನು ಮಾಡುವುದಕ್ಕೆ ತಯಾರಿದ್ದೇವೆ. ಕಳೆದ ಎರಡು ವರ್ಷಗಳಿಂದ ಶಿಕ್ಷಕರ ನೇಮಕಾತಿ ಇರಲಿಲ್ಲ. ಏಕೆಂದರೆ ನಿವೃತ್ತಿ ವಯಸ್ಸನ್ನು 58 ರಿಂದ 60 ವರ್ಷಕ್ಕೆ ವಿಸ್ತರಿಸಿದ್ದರಿಂದ ರಿಟೈರ್‌ಮೆಂಟ್ ಇರಲಿಲ್ಲ. ಈಗ ಈ ಪ್ರಕ್ರಿಯೆಯನ್ನು ಪ್ರಾರಂಭಿಸುತ್ತಿದ್ದೇವೆ. ನಿವೃತ್ತಿಯಿಂದ ಹಾಗೂ ಬೇರೆ ಬೇರೆ ಕಾರಣಗಳಿಂದ ಎಲ್ಲೆಲ್ಲಿ ಹುದ್ದೆಗಳು ತೆರವಾಗಿವೆ. ಆ ಹುದ್ದೆಗಳನ್ನು ತುಂಬುವುದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತಿದೆ. ಮಾನ್ಯ ಅಧ್ಯಕ್ಷರೆ, ತಾವು ಅದನ್ನು ಅರ್ಧ ಗಂಟೆ ಕಾಲ ಚರ್ಚೆಗೆ ಕೊಟ್ಟರೆ ಉಳಿದೆಲ್ಲ ವಿಷಯಗಳನ್ನು ಚರ್ಚೆ ಮಾಡೋಣ.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, I am not making any serious allegations. The question is it is a fact that there is shortage of teachers ಒಪ್ಪಿಕೊಳ್ಳಬೇಕೋ ಬೇಡವೋ Admittedly there is a shortage of teachers ಒಪ್ಪಿಕೊಳ್ಳಬೇಕು. ನೀವು ಎರಡು ವರ್ಷಗಳಿಂದ ಶಿಕ್ಷಕರನ್ನು ತುಂಬಿದ್ದರೆ shortage ಏಕೆ ಉಳಿಯುತ್ತಿತ್ತು? shortage ಇದ್ದಾಗ ತುಂಬಬೇಕಾಗಿತ್ತು. Ratio is not important ಮಲೆನಾಡು ಪ್ರದೇಶಗಳಲ್ಲಿ ಐದು ಜನ ವಿದ್ಯಾರ್ಥಿಗಳಿದ್ದರೂ ಒಬ್ಬ ಟೀಚರ್ ಹಾಕಬೇಕಾಗುತ್ತದೆ. ಒಂದು ಶಾಲೆ ಇರಬೇಕಾಗುತ್ತದೆ. 1994–95ರಲ್ಲಿ ನಾನು ಹಣಕಾಸಿನ ಮಂತ್ರಿ ಇದ್ದಾಗ ಒಂದು ಸರ್ಕ್ಯುಲರ್ ಹೊರಡಿಸಿದ್ದೆ, irrespective of the strength of the students each village should have a building, one teacher ಎಂದು ಮಾಡಿದ್ದೆವು. It is still there in the department. ನೀವೇಕೆ ಶಿಕ್ಷಕರನ್ನು ನೇಮಕ ಮಾಡುವುದಕ್ಕೆ ಮೀನಾಮೇಷ, ಖಾಲಿ ಹುದ್ದೆ ಇದ್ದರೆ ಎಲ್ಲಾ ಭರ್ತಿ ಮಾಡಿ. 28 ಇರಬೇಕು, 1:28 ಇರಬೇಕು, 1:20 ಇರಬೇಕು ಅವೆಲ್ಲ ಚರ್ಚೆ ಮಾಡುವುದಕ್ಕೆ ಹೋಗಬೇಡಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಚರ್ಚೆ ಮಾಡುವುದಕ್ಕೆ ಹೋದರೆ ಇಲ್ಲಿಯೇ ಅರ್ಧ ಗಂಟೆ ಆಗುತ್ತದೆ. ಅರ್ಧ ಗಂಟೆ ಕೊಟ್ಟರೆ ಈಗಲೇ ಚರ್ಚೆ ಮಾಡೋಣ. ಮಾನ್ಯ ಅಧ್ಯಕ್ಷರೆ ನೀವು ಸಮಯ ನಿಗದಿ ಕೊಡಿ ಅದರಂತೆ ಚರ್ಚೆ ಮಾಡೋಣ.

ಅಧ್ಯಕ್ಷರು: ಮಾನ್ಯ ಸದಸ್ಯರಾದ ಕಿಮ್ಮನೆ ರತ್ನಾಕರ್‌ರವರು ಎತ್ತದಂತಹ ಪ್ರಶ್ನೆ

ಇಡೀ ರಾಜ್ಯದಲ್ಲಿ ಶಿಕ್ಷಕರ ಕೊರತೆ ಇರುವ ವಿಷಯವನ್ನು ಅರ್ಧ ಗಂಟೆ ಕಾಲ ಚರ್ಚೆಗೆ ಅವಕಾಶ ಬೇಕೆಂದು ಕೋರಿರುವ ಮೇರೆಗೆ ಈ ಪ್ರಶ್ನೆಯನ್ನು ಬದಲಾವಣೆ ಮಾಡಿ 9ನೇ ತಾರೀಖು ಅರ್ಧ ಗಂಟೆ ಕಾಲ ಚರ್ಚೆಗೆ ಅವಕಾಶವನ್ನು ಕೊಡುತ್ತೇನೆ.

ಶ್ರೀ ಕಿಮ್ಮನೆ ರತ್ನಾಕರ್: ಧನ್ಯವಾದಗಳು.

ಹುಣಸೂರು ತಾಲ್ಲೂಕಿನಲ್ಲಿ ಸರ್ವೆ ಶಿಕ್ಷಣ ಅಭಿಯಾನ ಯೋಜನೆ

17 (319) **ಶ್ರೀ ಮಂಜುನಾಥ್ ಹೆಚ್.ಪಿ. (ಹುಣಸೂರು) (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) ದಯೆಯಿಟ್ಟು ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸುವರೆ:–**

ಅ) ಸರ್ವ ಶಿಕ್ಷಣ ಅಭಿಯಾನ ಯೋಜನೆಯಡಿ 2011–12ನೇ ಸಾಲಿಗೆ ಸರ್ಕಾರಿ ಶಾಲೆಗಳಿಗೆ ಹೆಚ್ಚುವರಿ ಮುಖ್ಯ ಶಿಕ್ಷಕರ ಕೊಠಡಿಗಳನ್ನು ಹಂಚಿಕೆ ಮಾಡಿ ಪ್ರಸ್ತಾವನೆ ಸಲ್ಲಿಸಲಾಗಿದ್ದು; ಯಾವ ಆಧಾರದ ಮೇಲೆ ಶಾಲೆಗಳನ್ನು ಆಯ್ಕೆ ಮಾಡಲಾಗಿದೆ (ವಿವರ ಒದಗಿಸುವುದು);

ಆ) ಈ ಪ್ರಕ್ರಿಯೆಯನ್ನು ಸಂಪೂರ್ಣ ಲೋಪದೋಷವಿದ್ದು ಹೆಸರಿಗೆ ಮಾತ್ರ ತಾಲ್ಲೂಕು ಹಾಗೂ ಜಿಲ್ಲಾ ಮಟ್ಟದ ಅನುಷ್ಠಾನ ಸಮಿತಿಯನ್ನು ರೂಪಿಸಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಈ ಪ್ರಸ್ತಾವನೆಯಲ್ಲಿ, ಹುಣಸೂರು ತಾಲ್ಲೂಕಿನ ಕಟ್ಟಡ ಕಟ್ಟಲು ನಿವೇಶನ ಲಭ್ಯವಿಲ್ಲದ 4 ರಿಂದ 5 ಶಾಲೆಗಳು ಹಾಗೂ ಕಟ್ಟಡ ಅವಶ್ಯವಿಲ್ಲದ ಶಾಲೆಗಳ ಪ್ರಸ್ತಾವನೆಯನ್ನು ಸಹ ಪಟ್ಟಿ ಮಾಡಿ ಸಲ್ಲಿಸಲಾಗಿದ್ದು ಇದನ್ನು ತಿದ್ದುಪಡಿ ಮಾಡಲು ಅವಕಾಶವಿದೆಯೇ;

ಈ) ನಿವೇಶನ ಲಭ್ಯವಿಲ್ಲದೇ ಇರುವುದರಿಂದ ಅನುದಾನ ಗತಿಸಿ ಹೋದಲ್ಲಿ ಇದಕ್ಕೆ ಯಾರು ಹೊಣೆ; ಈ ಬಗ್ಗೆ ಸರ್ಕಾರದ ವತಿಯಿಂದ ಏನು ಕ್ರಮಕ್ಕೈಗೊಳ್ಳಲಾಗುವುದು?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):

ಅ) 2011–12ನೇ ಸಾಲಿಗೆ ಸರ್ಕಾರಿ ಕಿರಿಯ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳಿಗೆ ಮುಖ್ಯ ಶಿಕ್ಷಕರ ಹುದ್ದೆ ಮಂಜೂರಾಗಿರುವಂತಹ ಶಾಲೆಗಳಿಗೆ ಮುಖ್ಯ ಶಿಕ್ಷಕರ ಕೊಠಡಿಗಳನ್ನು ಒದಗಿಸಲು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು. ಶಾಲೆಯಲ್ಲಿರುವ ಒಟ್ಟು ತರಗತಿಗಳು ಮತ್ತು ಶಾಲೆಯಲ್ಲಿ ಇರುವ ಒಟ್ಟು ಶಿಕ್ಷಕರ ಸಂಖ್ಯೆಯಲ್ಲಿ